ಯಾರು ಒಬ್ಬ ಬಡವನಲ್ಲಿ ಶಿವನನ್ನು ನೋಡಿ ಅವನಿಗೆ ಸೇವೆ ಸಲ್ಲಿಸುವರೋ, ಅವನಿಗೆ ಸಹಾಯ ಮಾಡುವರೋ, ಅವರ ಮೇಲೆ ಶಿವನಿಗೆ ಕೇವಲ ತನ್ನನ್ನು ವಿಗ್ರಹದಲ್ಲಿ ನೋಡುವವರಿಗಿಂತ ಹೆಚ್ಚು ಪ್ರೀತಿ."

**೧೩. ನಿಸ್ವಾರ್ಥತೆ :** ಸ್ವಾಮೀಜಿಯವರ ಪ್ರಕಾರ ನಿಸ್ವಾರ್ಥತೆಯೇ ಧರ್ಮದ ಪರೀಕ್ಷೆ. ಯಾರಲ್ಲಿ ಈ ನಿಸ್ವಾರ್ಥತೆ ಹೆಚ್ಚು ಇದೆಯೋ, ಅವನು ಹೆಚ್ಚು ಧಾರ್ಮಿಕ, ಅವನು ಹೆಚ್ಚು ಶಿವನ ಸಮೀಪ ದಲ್ಲಿರುವನು. ಸ್ವಾಮೀಜಿಯವರು ಧರ್ಮದ ಮರ್ಮವನ್ನು ಹೃದಯಂಗಮವಾಗಿ ಹೀಗೆ ಹೇಳಿಕೊಡುವರು: "ಮೊದಲು ನೀವು ಪರಿಶುದ್ಧರಾಗಿ. ಯಾರು ನಿಮ್ಮ ಬಳಿಗೆ ಬರುವರೋ, ಅವರಿಗೆ ಸಾಧ್ಯವಾದಷ್ಟು ಸಹಾಯಮಾಡಿ. ಇದೇ ಸತ್ಕರ್ಮ. ಇದರಿಂದ ಚಿತ್ತಶುದ್ಧಿಯಾಗುವುದು, ಸರ್ವಜೀವಿಗಳಲ್ಲಿಯೂ ನೆಲೆಸಿರುವ ಶಿವನ ದರ್ಶನ ಆಗ ನಿಮಗೆ ಆಗುವುದು."

**೧೪. ಆತ್ಮಶ್ರದ್ಧೆ:** ಅದ್ವೈತ ಸಿದ್ಧಾಂತವು ಪ್ರಚಂಡ ಆತ್ಮವಿಶ್ವಾಸವನ್ನು ನಮ್ಮಲ್ಲಿ ಉಂಟುಮಾಡುವುದು. ಸ್ವಾಮೀಜಿ ಹೇಳುತ್ತಾರೆ, "ಶ್ರದ್ಧೆ! ಶ್ರದ್ಧೆ! ಆತ್ಮಶ್ರದ್ಧೆ! ಶ್ರದ್ಧೆ! ಶ್ರದ್ಧೆ! ಈಶ್ವರನಲ್ಲಿ ಶ್ರದ್ಧೆ – ಇದೇ ಮಾಹಾತ್ಮ್ಯೆಯ ಮೂಲ. ನಿಮ್ಮಲ್ಲಿ ಆತ್ಮಶ್ರದ್ಧೆ ಇಲ್ಲದಿದ್ದರೆ ನಿಮಗೆ ಉದ್ಧಾರವಿಲ್ಲ. ಮೊದಲು ಆತ್ಮಶ್ರದ್ಧೆ ಇರಲಿ. ಆ ಶ್ರದ್ಧೆಯ ಮೇಲೆ ನಿಂತು ವೀರರಾಗಿ."

**ಭರತಖಂಡದ ಶ್ರೇಯಸ್ಸಿನ ದಾರಿ:** ಸ್ವಾಮಿ ವಿವೇಕಾನಂದರ ಪ್ರಕಾರ ಭರತಖಂಡದ ಶ್ರೇಯಸ್ಸಿನ ದಾರಿಯಲ್ಲಿ ಎರಡು ಆತಂಕ ಗಳಿವೆ: ಒಂದು ಸಂಪ್ರದಾಯ ನಿಷ್ಠೆ. ಎರಡನೆಯದು ಆಧುನಿಕ ಪಾಶ್ಚಾತ್ಯ ಸಂಸ್ಕೃತಿಯ ಅಂಧಾನುಕರಣೆ. ಇವೆರಡಕ್ಕೂ ಸ್ವಾಮೀಜಿ ಹೀಗೆ ಪರಿಹಾರವನ್ನು ಸೂಚಿಸುತ್ತಾರೆ:

"ಇತರ ರಾಷ್ಟ್ರಗಳಂತೆಯೇ ನಾವು ಪ್ರಗತಿಗಾಮಿಗಳಾಗಿರೋಣ. ಆದರೆ ಅದರ ಜೊತೆಗೆ ಹಿಂದೂಗಳಿಗೆ ಮಾತ್ರ ಸಾಧ್ಯವಾದ ಸಂಪ್ರದಾಯನಿಷ್ಠೆಯನ್ನೂ ಕಾಪಾಡಿಕೊಳ್ಳೋಣ... ಸ್ವತಂತ್ರವಾಗಿದ್ದೂ ನಿಮಗೆ ಸಾಧ್ಯವಾದಷ್ಟನ್ನು ಜೀರ್ಣಿಸಿಕೊಳ್ಳಿ. ಎಲ್ಲ ದೇಶಗಳಿಂದಲೂ ಕಲಿತುಕೊಳ್ಳಿ. ನಿಮಗೆ ಯಾವುದು ಉಪಯುಕ್ತವೋ ಅದನ್ನು ತೆಗೆದುಕೊಳ್ಳಿ. ಆದರೆ ನಾವು ಹಿಂದೂಗಳಾದ್ದರಿಂದ, ಸರ್ವವೂ ನಮ್ಮ ರಾಷ್ಟ್ರಧ್ಯೇಯಕ್ಕೆ ಅಧೀನವಾಗಿರಬೇಕು."

ಅಂತಹ ಧ್ಯೇಯ ಯಾವುದು? ಧರ್ಮರಕ್ಷಣೆಯೇ ಭರತ ಖಂಡದಲ್ಲಿ ಹುಟ್ಟುವ ಪ್ರತಿಯೊಬ್ಬ ಸ್ತ್ರೀ–ಪುರುಷ–ಮಕ್ಕಳ ಕರ್ತವ್ಯ ಎನ್ನುತ್ತಾರೆ ಸ್ವಾಮೀಜಿ. ಅವರ ಪ್ರಕಾರ, ಹಿಂದೂಗಳ ಪ್ರಧಾನ ಜೀವನೋದ್ದೇಶಗಳೆಂದರೆ, ಧರ್ಮ ಮತ್ತು ವೈರಾಗ್ಯ. ಹಿಂದೂಗಳ ಮೂಲಮಂತ್ರವೇ ಜಗತ್ತು ಕ್ಷಣಿಕ ಭ್ರಮೆ ಮಾತ್ರ, ಮಿಥ್ಯೆ ಎಂಬುದು. ಈ ಮೂಲಮಂತ್ರಕ್ಕೆ ಎಲ್ಲಿಯವರೆಗೆ ಧಕ್ಕೆ ಬರುವುದಿಲ್ಲವೋ, ಅಲ್ಲಿಯವರೆಗೆ ಯಾವುದೂ ನಮ್ಮ ರಾಷ್ಟ್ರವನ್ನು ನಾಶಮಾಡಲಾರದು. ಆದರೆ ನಮಗೆ ನಾವು ಹಾನಿ ಮಾಡಿಕೊಳ್ಳದ ತನಕ, ಜಗತ್ತಿನ ಯಾವುದೂ ನಮ್ಮನ್ನು ಹಾನಿ ಮಾಡಲಾಗದು. ಅದಕ್ಕಾಗಿ ನಾವು ಕೆಲಸಕ್ಕೆ ಬಾರದ ಹಳೆಯ ವಿಷಯಗಳನ್ನು ತ್ಯಜಿಸಬೇಕು. ನಮ್ಮ ಧರ್ಮ ಅಡುಗೆ ಮನೆಯ ಧರ್ಮವಾಗಿಬಿಡುವ ಅಪಾಯವಿದೆ. ನಮ್ಮ ಬುದ್ಧಿ ಮಂದವಾಗಿದೆ. ನಮ್ಮ ಸ್ವಂತಿಕೆ ಹೊರಟುಹೋಗಿದೆ. ನಮ್ಮ ಮನಸ್ಸು ದುರ್ಬಲವಾಗಿದೆ. ಈ ಪರಿಸ್ಥಿತಿ ಬದಲಾಗಬೇಕು. ನಾವು ಜಾಗೃತರಾಗಿ, ಬಲಶಾಲಿಗಳಾಗಿ, ಕಾರ್ಯೋನ್ಮುಖರಾಗಬೇಕು. ನಾವೆಲ್ಲ ಧೀರರಾಗಿದ್ದರೆ, ಅಂಜದೇ ಇದ್ದರೆ, ನಿರ್ವಂಚನೆಯಿಂದ ಕೆಲಸಕ್ಕೆ ಕೈಹಾಕಿದರೆ, ಭಾರತದ ಸಮಸ್ಯೆಗಳನ್ನೆಲ್ಲಾ ಪರಿಹರಿಸಬಹುದು. ಇದೇ ಸ್ವಾಮೀಜಿಯವರ ಆಶಯವಾಗಿತ್ತು, ಅವರ ಬಾಳಿನ ಕನಸಾಗಿತ್ತು.

ಸಮಾಜಸುಧಾರಣೆಯ ಬಗ್ಗೆಯೂ ಸ್ವಾಮೀಜಿ ತಮ್ಮದೇ ಆದ ಕ್ರಾಂತಿಕಾರಿ ದೃಷ್ಟಿಕೋನವನ್ನು ಇಟ್ಟುಕೊಂಡಿದ್ದರು. ಕೇವಲ ಸಮಾಜದ ದೋಷಗಳನ್ನು ಎತ್ತಿಹೇಳಿ ದೂಷಿಸುವುದರಿಂದ ಪ್ರಯೋಜನವಿಲ್ಲ. ಅದರಿಂದ ಸಮಾಜಸುಧಾರಣೆ ಸಾಧ್ಯವಿಲ್ಲ. ಸ್ವಾಮೀಜಿ ಹೀಗೆ ಹೇಳುತ್ತಾರೆ:

"ಈ ದೇಶದಲ್ಲಿ ಹಿಂದೆ ಅದ್ಭುತವಾದ ಕಾರ್ಯಗಳು ನೆರವೇರಿವೆ. ಆದರೆ ಅದನ್ನು ಮೀರಿದ ಕಾರ್ಯಸಾಧನೆಗೆ ಅವಕಾಶವಿದೆ, ಕಾಲವಿದೆ... ನಾನು ಯಾವ ಕ್ಷಣಿಕ ಸಮಾಜ ಸುಧಾರಣೆಯನ್ನೂ ಬೋಧಿಸುವವನಲ್ಲ... ಶಾಪ ಮತ್ತು ನಿಂದೆ – ಇವುಗಳಿಂದ ನಾವು ಏನನ್ನೂ ಸಾಧಿಸಲಾರೆವು... ನಾನು ದೋಷಗಳನ್ನು ನಿವಾರಿಸಲು ಕೈಹಾಕುವುದಿಲ್ಲ, ನಮ್ಮ ಪೂರ್ವಿಕರು ಮಾನವಕಲ್ಯಾಣಕ್ಕೆ ತೋರಿದ ಅತಿಶ್ರೇಷ್ಠ ಮಾರ್ಗದಲ್ಲಿ ಸಾಗಿ, ನಿಮ್ಮ ಆದರ್ಶವನ್ನು ಅನುಷ್ಠಾನದಲ್ಲಿ ವ್ಯಕ್ತಪಡಿಸಿ ಎನ್ನುತ್ತೇನೆ."

ಇದೇ ಸ್ವಾಮೀಜಿಯವರ ಸಮಾಜಸುಧಾರಣೆಯ ವಿಧಾನ. ಈ ವಿಧಾನವು ನಕಾರಾತ್ಮಕವಾದುದಲ್ಲ, ಸಕಾರಾತ್ಮಕವಾದುದು; ವಿಧ್ವಂಸನಕಾರಿಯಲ್ಲ, ರಚನಾತ್ಮಕವಾದುದು ಎಂಬುದನ್ನು ನಾವು ಗಮನಿಸಬೇಕು. ಹಾಗೆಂದೇ ಸ್ವಾಮಿ ವಿವೇಕಾನಂದರು ತಮ್ಮ ದೇಶಬಾಂಧವರಿಗೆ ಹೀಗೆ ಕರೆ ಕೊಡುತ್ತಾರೆ: "ಯಾರನ್ನೂ ದೂರಬೇಡಿ. ನಿಮ್ಮ ಬಾಯಿ ಸುಮ್ಮನಿರಲಿ. ಹೃದಯ ತೆರೆದಿರಲಿ."

ಆಧ್ಯಾತ್ಮಿಕತೆಯೇ ನೂತನ ಸಮಾಜದ ಸ್ವರೂಪಕ್ಕೆ ಆಧಾರ ಭೂತವಾಗಿರಬೇಕು ಎನ್ನುತ್ತಾರೆ ಸ್ವಾಮೀಜಿ. ಅಂತಹ ಸಮಾಜದ ನಿರ್ಮಾಣಕ್ಕಾಗಿ ಸ್ವಾಮೀಜಿ ತಮ್ಮ ದೇಶಬಾಂಧವರನ್ನು ಕಳಕಳಿಯಿಂದ ಹೀಗೆ ಕೇಳಿಕೊಳ್ಳುತ್ತಾರೆ:

"ಮಿತ್ರರೆ, ನಮ್ಮ ಜನಾಂಗದ ಶ್ರೇಯಸ್ಸಿಗೆ ಇರುವುದೊಂದೇ ಮಾರ್ಗ. ಅದೆಂದರೆ ನಮ್ಮ ಪೂರ್ವಿಕರು ಇತ್ತ ಅಮೂಲ್ಯ ಧರ್ಮಧನವನ್ನು ರಕ್ಷಿಸುವುದು... ಇತರ ದೇಶಗಳಿಂದ ಏನನ್ನು ಬೇಕಾದರೂ ಪಡೆಯಿರಿ. ಆದರೆ ಅವು ಸದಾ ನಮ್ಮ ಪ್ರಧಾನ ಆದರ್ಶಕ್ಕೆ ಅಧೀನವಾಗಿರಬೇಕು. ಇದರಿಂದ ಅದ್ಭುತವಾದ, ವೈಭವಪೂರ್ಣವಾದ ಭವಿಷ್ಯಭಾರತವು ಮೂಡಿಬರುವುದು... ಸಹೋದರರೇ, ಎಲ್ಲರೂ ಕಷ್ಟಪಟ್ಟು ದುಡಿಯೋಣ. ನಿದ್ರೆಗೆ ಸಮಯವಲ್ಲ ಇದು. ನಮ್ಮ ಇಂದಿನ ಕಾರ್ಯದ ಮೇಲೆ ಭವಿಷ್ಯ ಭಾರತ ನಿಂತಿದೆ. ನಮಗಾಗಿ ಆಕೆ ಕಾಯುತ್ತಿರುವಳು. ಆಕೆ ಕೇವಲ ನಿದ್ರಿಸುತ್ತಿರುವಳು, ಅಷ್ಟೇ. ಜಾಗೃತರಾಗಿ, ಏಳಿ, ಎದ್ದುನೋಡಿ. ಹಿಂದಿಗಿಂತ ಶೋಭಾಯಮಾನವಾಗಿರುವ ಸನಾತನ ಸಿಂಹಾಸನದ ಮೇಲೆ ಮಂಡಿಸಿರುವುದನ್ನು ನೋಡಿ."

ಈ ಪರಮಪ್ರೇಮದ ಕರೆಗೆ ನಮ್ಮ ಜನ ಎಂದು ಓಗೊಡುವರೋ ಅಂದು ನಮ್ಮ ರಾಷ್ಟ್ರದ ಕಲ್ಯಾಣವಾದೀತು, ಅಲ್ಲವೇ?

# ಮಹಾಸಂತ ಪವಾಹಾರಿ ಬಾಬಾ

ಬ್ರ. ಸುವಿಮಲಚೈತನ್ಯ


ಗಾಜಿಪುರದಲ್ಲಿರುವ ಪವಾಹಾರಿ ಬಾಬಾ ಆಶ್ರಮ

**ಪವಾಹಾರಿ ಬಾಬಾ ಭಾರತವನ್ನು ಪುನೀತಗೊಳಿಸಿದ ಲಕ್ಷಾಂತರ ಮಂದಿ ಅಜ್ಞಾತ ಸಂತರಲ್ಲಿ ಒಬ್ಬರು. ಸ್ವಾಮಿ ವಿವೇಕಾನಂದರು. ಅವರ ಮಹಾನತೆಯನ್ನು ಜಗತ್ತಿಗೆ ಪರಿಚಯ ಮಾಡಿಕೊಟ್ಟರು. ಈ ಮಹನೀಯರ ಜೀವನ ಕಥನವನ್ನು ಸ್ವಾರಸ್ಯಕರವಾಗಿ ಬಿಂಬಿಸಿರುವ ಲೇಖಕರು ಮೈಸೂರಿನ ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.**

ಭಾರತಮಾತೆಯ ಮಡಿಲಿನಲ್ಲಿ ಅಸಂಖ್ಯಾತ ಸಾಧುಸಂತರು ಅವತಾರವೆತ್ತಿದ್ದಾರೆ. ಆರ್ಯಭೂಮಿಯು ಹಲವಾರು ಮಹಾತ್ಮರಿಗೆ, ಸಂತ ಮಹಾಂತರಿಗೆ, ಅವತಾರಪುರುಷರಿಗೆ ಜನ್ಮನೀಡಿದಂತಹ ಪುಣ್ಯಭೂಮಿ. ಅವರೆಲ್ಲ ಲೋಕಕಲ್ಯಾಣಕ್ಕೆಂದು ಜನ್ಮತಾಳಿದ್ದಾರೆ. ಸಾಮಾನ್ಯರಂತೆ ಸ್ವಾರ್ಥಕ್ಕಾಗಿ ಕಾರ್ಯಮಾಡದೆ, ಪರರ ಹಿತಕ್ಕಾಗಿ ಹಗಲಿರಳೂ ಶ್ರಮಿಸಿದ್ದಾರೆ. ಆದರೆ ಅವರಲ್ಲಿ, ಎಲ್ಲೋ ಕೆಲವೇ ಕೆಲವರು ಮಾತ್ರವೇ ಹೊರಗಿನ ಪ್ರಪಂಚದ ಕಣ್ಣಿಗೆ ಬೀಳುತ್ತಾರೆ. ಅವರಲ್ಲಿ ಬಹುತೇಕ ಸಂತರು ನಿಶ್ಶಬ್ದವಾಗಿ ಗುರಿಯನ್ನು ಸಾಧಿಸಿ ವಿಶ್ವಾತ್ಮನಲ್ಲಿ ಐಕ್ಯವನ್ನು ಹೊಂದುತ್ತಾರೆ. ಈ ಸಾಲಿನಲ್ಲಿ ಸಂತ ಪವಾಹಾರಿ ಬಾಬಾ ಅವರೂ ಒಬ್ಬರು. ಸ್ವಾಮಿ ವಿವೇಕಾನಂದರು ಪವಾಹಾರಿ ಬಾಬಾರನ್ನು ಪರಿಚಯಿಸದಿದ್ದರೆ ನಮಗಾರಿಗೂ ಅವರನ್ನು ತಿಳಿಯಲು ಸಾಧ್ಯವಾಗುತ್ತಿರಲಿಲ್ಲ. ಸ್ವಾಮಿ ವಿವೇಕಾನಂದರು ತಮ್ಮ ಪರಿವ್ರಾಜಕ ಜೀವನದಲ್ಲಿ ಪವಾಹಾರಿ ಬಾಬಾರನ್ನು ಕಂಡು ಅವರಿಂದ ಬಹಳ ಪ್ರಭಾವಿತರಾಗಿದ್ದರು; ಅದಲ್ಲದೆ ಪವಾಹಾರಿ ಬಾಬಾರ ಶಿಷ್ಯರಾಗಬೇಕೆಂದು ಕೂಡ ಹಂಬಲಿಸಿದ್ದರು. ಸ್ವಾಮಿ ವಿವೇಕಾನಂದರು ಪವಾಹಾರಿ ಬಾಬಾರನ್ನು ಒಮ್ಮೆ, "ತಾವು ಹೊರಗೆ ಹೋಗಿ ಜನರಿಗೆ ಬೋಧನೆಯನ್ನು ಏಕೆ ನೀಡುತ್ತಿಲ್ಲ? ಜನರಿಗೇಕೆ ನೆರವಾಗುತ್ತಿಲ್ಲ?" ಎಂದು ಪ್ರಶ್ನಿಸಿದರು. ಅದಕ್ಕೆ ಪವಾಹಾರಿ ಬಾಬಾ, "ಭೌತಿಕ ಸಹಾಯ ಮಾತ್ರ ಸಹಾಯವೇ? ಭೌತಿಕವಾಗಿ ಯಾವುದೇ ಕ್ರಿಯೆಗಳನ್ನು ಮಾಡದೆ ಮಾನಸಿಕ ಸ್ತರದಲ್ಲಿ ಬೇರೆಯವರ ಮನಸ್ಸಿಗೆ ನೆರವಾಗಲು ಸಾಧ್ಯವಿಲ್ಲವೇ?" ಎಂಬ ಮರುಪ್ರಶ್ನೆಯನ್ನು ಹಾಕಿದ್ದರು. ಸ್ವಾಮಿ ವಿವೇಕಾನಂದರು ತಮ್ಮ ಉಪನ್ಯಾಸಗಳಲ್ಲಿ ಪವಾಹಾರಿ ಬಾಬಾ ಅವರ ಕುರಿತು ಹಲವು ಕಡೆ ಪ್ರಸ್ತಾಪಿಸಿದ್ದಾರೆ. ಆದರೂ ಬಾಬಾ ಅವರ ವೈಯಕ್ತಿಕ ಜೀವನದ ಕುರಿತು ನಾವು ತಿಳಿದಿರುವುದು ಅತ್ಯಲ್ಪ. ಸ್ವಾಮಿ ನಿರ್ವೇದಾನಂದರು ಪವಾಹಾರಿ ಬಾಬಾ ಅವರ ಸಂಬಂಧಿಕರ ಸಹಾಯದಿಂದ ಕಲೆತುಹಾಕಿರುವ ವಿಷಯದ ಆಧಾರದ ಮೇಲೆ, ಆ ಮಹಾಪುರುಷರ ಜೀವನವನ್ನು ಚಿತ್ರಿಸಲು ಇಲ್ಲಿ ಪ್ರಯತ್ನಿಸಲಾಗಿದೆ.

ಉತ್ತರ ಪ್ರದೇಶದ ಜೌನ್‌ಪುರ್ ಬಳಿಯಲ್ಲಿರುವ ಪ್ರೇಮಪುರ ಎಂಬಲ್ಲಿ ೧೮೪೦ರಲ್ಲಿ ಪವಾಹಾರಿ ಬಾಬಾ ಹುಟ್ಟಿದರು. ಸಂಪ್ರದಾಯಸ್ಥ ಬ್ರಾಹ್ಮಣರಾಗಿದ್ದ ಅಯೋಧ್ಯ ತಿವಾರಿ ಎಂಬುವವರ ಎರಡನೇ ಮಗ ಇವರು. ಇವರ ಬಾಲ್ಯದ ಹೆಸರು ಹರಭಜನ್‌ದಾಸ್ ಎಂದು. ಇವರಿಗೆ ಇಬ್ಬರು ಸಹೋದರರು ಮತ್ತು ಒಬ್ಬಳು ಸಹೋದರಿ ಇದ್ದರು. ನೋಡಲು ಸುಂದರನಾಗಿದ್ದ ಹರ್‌ಭಜನ್‌ದಾಸ್ ತನ್ನ ಬಾಲ್ಯದಲ್ಲೇ ಚಿಕನ್ ಪಾಕ್ಸ್ ಕಾಯಿಲೆಯಿಂದ ಕಣ್ಣೊಂದನ್ನು ಕಳೆದುಕೊಂಡಿದ್ದನು.

ಅಯೋಧ್ಯ ತಿವಾರಿಯ ತಮ್ಮನ ಹೆಸರು ಲಕ್ಷ್ಮೀನಾರಾಯಣ ಎಂದು. ಇವರು ನೈಷ್ಠಿಕ ಬ್ರಹ್ಮಚರ್ಯ ವ್ರತವನ್ನು ಬಾಲ್ಯದಲ್ಲೇ ಸ್ವೀಕರಿಸಿ ಮನೆಯನ್ನು ತ್ಯಜಿಸಿದ್ದರು. ಶ್ರೀರಾಮಾನುಜಾಚಾರ್ಯರ ವಡಗಲೈ ಸಂಪ್ರದಾಯಕ್ಕೆ ಸೇರಿದ ಇವರು, ಹಲವಾರು ವರ್ಷಗಳ ಕಾಲ ತೀರ್ಥಯಾತ್ರೆಯನ್ನು ಮಾಡುತ್ತಿದ್ದರು. ದಾರಿಯಲ್ಲಿ ಲಕ್ಷ್ಮೀನಾರಾಯಣರು ವಾರಾಣಸಿಯ ಬಳಿ ಬಂದರು. ವಾರಾಣಸಿಯ ಸಮೀಪವಿರುವ ಗಾಧಿಪುರ್ (ಗಾಜಿಪುರ್ ಎಂದು ಪ್ರಸಿದ್ಧವಾಗಿದೆ) ಸಮೀಪವಿರುವ ಕುರ್ತ ಎಂಬ ಹಳ್ಳಿಯಲ್ಲಿ ಗಂಗಾನದಿಯ ದಡದ ಬಳಿ ಮೂರು ದಿವಸಗಳ ಕಾಲ ನೆಲಸಬೇಕೆಂದು ಸಂಕಲ್ಪ ಮಾಡಿದರು. ಆಗ ಆ ಸ್ಥಳ ದಟ್ಟವಾದ ಕಾಡಿನಿಂದ ಕೂಡಿತ್ತು. ಯಾರೂ ಸಮೀಪದಲ್ಲಿ ಸುಳಿಯುತ್ತಿರಲಿಲ್ಲ. ಅಲ್ಲದೆ ಗಂಗೆಯು ಉತ್ತರಾಭಿಮುಖವಾಗಿ ಹರಿಯುವುದರಿಂದ ಇದು ಸಾಧನೆಗೆ ಪ್ರಶಸ್ತವಾದ ಸ್ಥಳವಾಗಿತ್ತು. ಹೀಗಾಗಿ ಲಕ್ಷ್ಮೀನಾರಾಯಣರು ಇಲ್ಲಿ ಮೂರು ದಿವಸಗಳ ಕಾಲ ನೆಲಸಲು ನಿರ್ಧರಿಸಿದ್ದರು. ಮೊದಲನೇ ದಿವಸ ಬೇಟೆಗೆಂದು ಬಂದ ಒಬ್ಬ ಆಂಗ್ಲ ಅಧಿಕಾರಿ ಮತ್ತಿತರರು ಇವರನ್ನು

ನೋಡಿದರು. ಆಂಗ್ಲ ಅಧಿಕಾರಿಯು ಆ ಜಾಗದಿಂದ ತತ್‌ಕ್ಷಣವೇ ಹೊರಡಬೇಕೆಂದು ಅವರಿಗೆ ಆಜ್ಞಾಪಿಸಿದನು. "ನಾವು ಮೂರು ದಿವಸಗಳ ಕಾಲ ನೆಲೆಸಬೇಕೆಂದು ಸಂಕಲ್ಪಿಸಿದ್ದೇವೆ, ಆದ್ದರಿಂದ ಮೂರು ದಿವಸಗಳ ಬಳಿಕವೇ ನಾವು ಹೊರಡುತ್ತೇವೆ" ಎಂದರು ಆ ಧೀರಸಂನ್ಯಾಸಿ. ಆಂಗ್ಲ ಅಧಿಕಾರಿಯು ಸಾಧುಗಳನ್ನು ಸಂಶಯ ದೃಷ್ಟಿಯಿಂದ ನೋಡುತ್ತಿದ್ದ. ಹೀಗಾಗಿ ಮೂರು ದಿನಗಳ ಉಪಾಸನೆ ಮುಗಿದ ಬಳಿಕ ಹೊರಡಲೇಬೇಕು, ಇಲ್ಲವಾದಲ್ಲಿ ಪರಿಣಾಮವು ನೆಟ್ಟಗಿರುವುದಿಲ್ಲವೆಂದು ದರ್ಪದಿಂದ ಕೂಗಿ ಹೇಳಿ ಮನೆಗೆ ತೆರಳಿದ. ಅಲ್ಲಿ ಹೋಗಿ ನೋಡುತ್ತಾನೆ, ತನ್ನ ಸಂಬಂಧಿಕರೊಬ್ಬರು ಆಕಸ್ಮಿಕವಾಗಿ ಯಾವುದೋ ಒಂದು ವಿಚಿತ್ರ ಕಾಯಿಲೆಗೆ ತುತ್ತಾಗಿದ್ದರು. ಯಾವ ವೈದ್ಯರಿಗೂ ಅದನ್ನು ಗುರುತಿಸಲು ಕೂಡ ಸಾಧ್ಯವಾಗಲಿಲ್ಲ. ಆಂಗ್ಲ ಅಧಿಕಾರಿಯ ಗುಮಾಸ್ತನು, "ನೀವು ಸಾಧುಗಳನ್ನು ತೆಗಳಿದ್ದರ ಪರಿಣಾಮವಿದು. ನೀವು ಅವರ ಬಳಿ ಸಾರಿ ಕ್ಷಮೆಯಾಚಿಸಿದಲ್ಲಿ ಕಾಯಿಲೆ ವಾಸಿಯಾಗುತ್ತದೆ" ಎಂದನು. ಬೇರೆ ದಾರಿಯಿಲ್ಲದೆ, ಅಧಿಕಾರಿಯು ಲಕ್ಷ್ಮೀನಾರಾಯಣ ಸಂತರ ಬಳಿ ಸಾರಿ, ನಡೆದ ವೃತ್ತಾಂತವನ್ನು ತಿಳಿಸಿ, ಕ್ಷಮೆಯಾಚಿಸಿದನು. ಅದಕ್ಕೆ ಅವರು, "ಇದಾವುದೂ ನಮಗೆ ತಿಳಿಯದು; ನಾವು ಯಾರನ್ನೂ ಶಪಿಸುವುದಿಲ್ಲ" ಎಂದು ಉತ್ತರಿಸಿದರು. ಆದರೆ ಅಧಿಕಾರಿಯ ಒತ್ತಾಯದ ಮೇರೆಗೆ ಸ್ವಲ್ಪ ವಿಭೂತಿಯನ್ನು ಮಂತ್ರಿಸಿ ನೀಡಿದರು. ಅಧಿಕಾರಿಯು ಮನೆಗೆ ತಲಪುವಷ್ಟರಲ್ಲೇ ರೋಗಿಯು ಎದ್ದು ಕುಳಿತಿದ್ದನು. ಅಧಿಕಾರಿಗೆ ತುಂಬ ಅಚ್ಚರಿಯಾಯಿತು. ಅವನು ಒಡನೆ ಸಂತ ಲಕ್ಷ್ಮೀನಾರಾಯಣರ ಬಳಿ ಸಾರಿ ತಾವು ಇಲ್ಲೇ ಶಾಶ್ವತವಾಗಿ ನೆಲಸಬೇಕೆಂದು ಪ್ರಾರ್ಥಿಸಿಕೊಂಡನು. ಅದಲ್ಲದೆ ಸರ್ಕಾರದಿಂದ ಉಚಿತವಾಗಿ ಸ್ವಲ್ಪ ಜಾಗವನ್ನು ಕೂಡ ಮಂಜೂರು ಮಾಡಿಸಿದನು. ಹೀಗಾಗಿ ಲಕ್ಷ್ಮೀನಾರಾಯಣರು ಅಲ್ಲೇ ಆಶ್ರಮವೊಂದನ್ನು ಮಾಡಿಕೊಂಡು ನೆಲೆಸಿದರು.

ಹರ್‌ಭಜನ್‌ದಾಸನು ಅಧ್ಯಯನಕ್ಕೆಂದು ತನ್ನ ಚಿಕ್ಕಪ್ಪನಾದ ಲಕ್ಷ್ಮೀನಾರಾಯಣರ ಆಶ್ರಮಕ್ಕೆ ಬಂದನು. ಹರ್‌ಭಜನ್‌ದಾಸನಿಗೆ ಒಂದೇ ಕಣ್ಣಿತ್ತೆಂಬುವುದನ್ನು ನೋಡಿದ್ದೇವಲ್ಲ. ಸಂತ ಲಕ್ಷ್ಮೀ ನಾರಾಯಣರು ಅವನಿಗೆ ಹೀಗೆ ಸಮಾಧಾನ ಮಾಡಿದರು: "ರಾಜ ರಣಜಿತ್ ಸಿಂಗನಿಗೂ ಕೂಡ ಒಂದೇ ಕಣ್ಣು ಇತ್ತು. ಇದು ಶುಭ ಸೂಚನೆ" ಎಂದರು. ಅದಲ್ಲದೆ ಈ ಹಿಂದೆಯೇ ಹರ್‌ಭಜನ್ ದಾಸನಿಗೆ ಮಹಾಯೋಗಿಯಾಗುವ ಲಕ್ಷಣಗಳಿವೆ ಎಂದು ಅವರು ಆತನ ತಂದೆ ಅಯೋಧ್ಯ ತಿವಾರಿಯ ಬಳಿ ಭವಿಷ್ಯವನ್ನು ಕೂಡ ನುಡಿದಿದ್ದರು.

ಅಧ್ಯಯನಕ್ಕೆಂದು ಬಂದ ಹರ್‌ಭಜನ್ ತೋರಿಸಿದ ಸಾಧು ಸ್ವಭಾವವನ್ನು ಕಂಡು ಲಕ್ಷ್ಮೀನಾರಾಯಣರು ಸಂತೋಷಪಟ್ಟರು. ಅವನು ಉತ್ತಮ ಸಾಧುವಾಗಬಹುದು ಮತ್ತು ಮುಂದೆ ತಮ್ಮ ಆಶ್ರಮದ ಮೇಲ್ವಿಚಾರಣೆಯನ್ನು ವಹಿಸಬಹುದು ಎಂದೆಣಿಸಿದ್ದರು. ಅಧ್ಯಯನವನ್ನು ಪ್ರಾರಂಭಿಸುವ ಮುನ್ನ ಹರ್‌ಭಜನ್‌ದಾಸ್‌ಗೆ ಸಂಪ್ರದಾಯದಂತೆ ಉಪನಯನ ಸಂಸ್ಕಾರವಾಯಿತು. ಸುಮಾರು ಒಂದು ವರ್ಷ ಕಾಲ ಪಂಡಿತರೊಬ್ಬರ ಬಳಿ ಸಂಸ್ಕೃತದ ಅಧ್ಯಯನವನ್ನು ಮಾಡಿ, ಹಲವಾರು ವಿದ್ವಾಂಸರ ಬಳಿ ವೇದ, ವೇದಾಂಗ ಮತ್ತು ಅನೇಕ ಧಾರ್ಮಿಕ ಗ್ರಂಥಗಳನ್ನು ಆತನು ಅಧ್ಯಯನ ಮಾಡಿದನು. ಅವುಗಳಲ್ಲಿ ಬಹಳ ಪರಿಣತಿಯನ್ನು ಹೊಂದಿದನು. ಆ ಕಾಲದಲ್ಲಿ ಪ್ರಸಿದ್ಧರಾಗಿದ್ದ ಶ್ರೀ ಗೋಪಾಲ ಪರ್ವತ ಪರಮಹಂಸ ಸಂನ್ಯಾಸಿಗಳ ಬಳಿ ಪಂಚದಶಿಯನ್ನು ಕಲಿತನು. ಆ ಗುರುಗಳೆಲ್ಲರೂ ಹರ್‌ಭಜನ್‌ದಾಸನ ಬುದ್ಧಿಸಾಮರ್ಥ್ಯ ಮತ್ತು ಜ್ಞಾನಾರ್ಜನೆಯಲ್ಲಿ ಅವನಿಗಿದ್ದ ಅಪಾರ ಆಸಕ್ತಿಯನ್ನು ಕಂಡು ಮೆಚ್ಚಿಕೊಂಡರು.

ಹರ್‌ಭಜನ್‌ದಾಸನು ಅಧ್ಯಯನದ ಜೊತೆಗೆ ಆಶ್ರಮದ ಎಲ್ಲಾ ಸೇವಾಕಾರ್ಯಗಳನ್ನೂ ನಿಷ್ಠೆಯಿಂದ ಮಾಡುತ್ತಿದ್ದನು. ಶ್ರೀರಘುನಾಥ ಮತ್ತು ಇತರ ದೇವತೆಗಳ ಪೂಜಾಕಾರ್ಯಗಳಲ್ಲಿ ಮತ್ತು ನೈವೇದ್ಯ ಸಮರ್ಪಣೆಯಲ್ಲಿ ತನ್ನ ಚಿಕ್ಕಪ್ಪನಿಗೆ ನೆರವಾಗುತ್ತಿದ್ದನು. ವಿಶ್ರಾಂತಿಯ ಸಮಯದಲ್ಲಿ ಗಂಗೆಯ ದಡದಲ್ಲೋ ಅಥವಾ ಸಮೀಪದ ಕಾಡಿನಲ್ಲೋ ಏಕಾಂಗಿಯಾಗಿ ಕಾಲ ಕಳೆಯುತ್ತಿದ್ದನು. ಇವನ ಗಾಂಭೀರ್ಯವನ್ನು ಕುರಿತು ಸಹಪಾಠಿಗಳು ಅಪಹಾಸ್ಯಮಾಡುತ್ತಿದ್ದರು ಎಂದು ಸ್ವಾಮಿ ವಿವೇಕಾನಂದರು ಒಂದು ಕಡೆ ಹೇಳುತ್ತಾರೆ.

ಯೌವನಾವಸ್ಥೆಯನ್ನು ತಲುಪುವ ವೇಳೆಗೆ ಹರ್‌ಭಜನ್‌ದಾಸನು ವೇದ ಮತ್ತು ಇತರ ಗ್ರಂಥಗಳ ಅಧ್ಯಯನ ಮಾಡಿ ಮುಗಿಸಿದ್ದನು. ಇದನ್ನು ಕಂಡ ಅಯೋಧ್ಯ ತಿವಾರಿಯು ತನ್ನ ಮಗನಿಗೆ ಮದುವೆ ಮಾಡಲು ಇದೇ ಸೂಕ್ತ ಸಮಯ ಎಂದೆಣಿಸಿ ಇದರ ಕುರಿತು ಮಾತನಾಡಲು ಆಶ್ರಮಕ್ಕೆ ಬಂದನು. ಆದರೆ ಈಗಾಗಲೇ ಹರ್‌ಭಜನ್‌ದಾಸ್‌ನಲ್ಲಿ ವೈರಾಗ್ಯಭಾವವು ಮೂಡಿತ್ತು. ಜಗತ್ತಿನ ನಶ್ವರತೆಯನ್ನು ಅರಿತಿದ್ದ ಅವನು ಸಂಸಾರದಲ್ಲಿರಲು ಇಷ್ಟಪಡದೆ, ಆಧ್ಯಾತ್ಮಿಕ ಸಾಧನೆಯ ಮೂಲಕ ಪರಮಗತಿಯನ್ನು ಪಡೆಯಬೇಕೆಂದು ಹಂಬಲಿಸಿದನು. ಇದರಿಂದ ಅಯೋಧ್ಯ ತಿವಾರಿಯು ನಿರಾಸೆಯಿಂದ ಮನೆಗೆ ತೆರಳಬೇಕಾಯಿತು.

ಸುಮಾರು ೧೮೫೬ ರಲ್ಲಿ ಹರ್‌ಭಜನ್‌ದಾಸ್‌ನ ಚಿಕ್ಕಪ್ಪ ಮತ್ತು ಗುರುವಾಗಿದ್ದ ಸಂತ ಲಕ್ಷ್ಮೀನಾರಾಯಣರು ಪರಂಧಾಮವನ್ನು ಹೊಂದಿದರು. ಇದರಿಂದ ವಿಚಲಿತನಾದ ಹರ್‌ಭಜನ್‌ದಾಸ್‌ನ ಹೆಗಲ ಮೇಲೆ ಶ್ರೀರಘುವೀರನ ನಿತ್ಯಪೂಜೆ ಮತ್ತು ಆಶ್ರಮದ ಆಗು ಹೋಗುಗಳನ್ನು ನೋಡಿಕೊಳ್ಳುವ ಜವಾಬ್ದಾರಿ ಬಂದಿತು. ಆಶ್ರಮದ ಸೇವಾಕಾರ್ಯಗಳನ್ನು ದಕ್ಷತೆಯಿಂದ ಮಾಡುತ್ತಿದ್ದನಾದರೂ ಆತನಿಗೆ ಮನಃಶಾಂತಿಯಿರಲಿಲ್ಲ. ಆದ್ದರಿಂದ ಆಶ್ರಮದ ಮೇಲ್ವಿಚಾರಣೆಯನ್ನು ಇತರ ಆಶ್ರಮವಾಸಿಗಳಿಗೆ ಒಪ್ಪಿಸಿ, ತೀರ್ಥಯಾತ್ರೆಗೆ ಹೋದನು. ಭಾರತದ ನಾಲ್ಕು ಮೂಲೆಗಳಲ್ಲಿರುವ ಪ್ರಸಿದ್ಧ ಪುಣ್ಯ ಕ್ಷೇತ್ರಗಳಾದ ಪುರಿ, ರಾಮೇಶ್ವರ, ಬದರಿನಾಥ ಮತ್ತು ದ್ವಾರಕೆಗಳನ್ನು ಸಂದರ್ಶಿಸಿದನು.

ದ್ವಾರಕೆಗೆ ಹೋಗುವ ದಾರಿಯಲ್ಲಿ ಅವಧೂತ ಗುರು ದತ್ತಾತ್ರೇಯರ ಸ್ಥಳವಾದ ಗಿರ್‌ನಾರ್ ಬಳಿಯ ಬೆಟ್ಟದಲ್ಲಿ ಕೆಲವು ಸಮಯ ಕಳೆದನು. ಅಲ್ಲಿ ಯಾರ ಕಣ್ಣಿಗೂ ಕಾಣಿಸದೆ ತಪಸ್ಸನ್ನು ಆಚರಿಸುತ್ತಿದ್ದ ಯೋಗಿಯೊಬ್ಬನನ್ನು ಕಂಡನು. ಆ ಯೋಗಿಯು ಹರ್‌ಭಜನ್‌ದಾಸ್‌ನಿಗೆ ಹಲವಾರು ಯೋಗಸಾಧನೆಗಳನ್ನು ಉಪದೇಶಿಸಿದನು. ಸಂತೋಷಗೊಂಡ ಹರ್‌ಭಜನ್‌ದಾಸನು ಯೋಗಿಯ ಸೇವೆಗೈಯುತ್ತಾ ಇನ್ನೂ ಹೆಚ್ಚು ಹೆಚ್ಚು ಯೋಗ ಸಾಧನೆಗಳನ್ನು ಕಲಿಯಬೇಕೆಂದು ಸಂಕಲ್ಪಿಸಿದನು. ಅಲ್ಲದೆ ಶಾಶ್ವತ